<u>**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**</u>

<u>**Spl.C.78/2019**</u>

**P.W.-05**
**C.W.-14**

| | | |
|---|---|---|
| ಹೆಸರು | : | ಅಭಿರಾಮ್ ಜಿ. ಶಂಕರ್ |
| ತಂದೆಯ ಹೆಸರು | : | ಗಿರಿ ಶಂಕರ್ ಆರ್. |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಉಪ ನಿರ್ದೇಶಕರು, ಲಾಲ್ ಬಹದ್ದೂರ್ ಶಾಸ್ತ್ರೀ ರಾಷ್ಟ್ರೀಯ ಆಡಳಿತ ಸಂಸ್ಥೆ ಮಸ್ಸೂರಿ, ಉತ್ತರಖಾಂಡ |
| ವಾಸಸ್ಥಳ | : | ಮಸ್ಸೂರಿ |

<u>**ದಿನಾಂಕಃ22.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>
<u>**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**</u>

1. ನಾನು 30.04.2018 ರಿಂದ ದಿಃ28.08.2020 ರವರೆಗೆ ಮೈಸೂರಿನ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 14.09.2018 ರ ಪತ್ರ, ಕಛೇರಿಯಲ್ಲಿ ದಿಃ26.09.2018 ರಂದು ಸ್ವೀಕೃತವಾಗಿದ್ದು, ಅದರಲ್ಲಿ ದೂರುದಾರರ ದೂರು, ಪ್ರ.ಮ.ವ.ದ ಪ್ರತಿ, ಪ್ರಾಯೋಗಿಕ ಮಹಜರಿನ ಪ್ರತಿ, ಟ್ರಾಪ್ ಮಹಜರ್ ವರದಿ, ರಾಸಾಯನಿಕ ಪರೀಕ್ಷಾ ವರದಿ, ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ ಮತ್ತು ಆರೋಪಿಯ ಸಮಾಜಾಯಿಷಿ ಮತ್ತು ಸಾಕ್ಷಿದಾರ ಹೇಳಿಕಗಳನ್ನು ಮತ್ತು ದೋ.ಪಟ್ಟಿಯನ್ನು ಲಗತ್ತಿಸಲಾಗಿತ್ತು. ಆರೋಪಿಯನ್ನು ಸರ್ಕಾರಿ ನೌಕರಿಯಿಂದ ತೆಗೆಯುವ ಮತ್ತು ನೇಮಿಸಿಕೊಳ್ಳುವ ಅಧಿಕಾರವನ್ನು ನಾನು ಹೊಂದಿದವನಾಗಿದ್ದೆ. ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನಾನು ದಿಃ15.12.2018 ರಂದು ಅಭಿಯೋಜನಾ ಮಂಜೂರಾತಿಯನ್ನು ಪಿ.ಸಿ.ಆಕ್ಟ್ ಅಡಿಯಲ್ಲಿ ನೀಡಿರುತ್ತೇನೆ, ಅಂದೆ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

"ಭ್ರಷ್ಟಾಚಾರ ನಿರೋಧಕಾ ಕಾಯ್ದೆ 1988ರ ಕಲಂ 19(1) (c)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ನಾಗೇಶ್ ಕುಮಾರ್, ಗ್ರಾಮಲೆಕ್ಕಿಗರು, ಸಿದ್ದಲಿಂಗಪುರ ವೃತ್ತ, ತಾಲ್ಲೂಕು ಕಛೇರಿ, ಮೈಸೂರು ತಾಲ್ಲೂಕು ಪ್ರಸ್ತುತ ಶ್ರೀರಾಂಪುರ ವೃತ್ತ, ತಾಲ್ಲೂಕು ಕಛೇರಿ, ಮೈಸೂರು ತಾಲ್ಲೂಕು ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(d) ಜೊತೆಯಲ್ಲಿ ಓದಲಾದ ಕಲಂ 13(2) ರನ್ವಯ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜಿಸಲು ಈ ಮೂಲಕ ಮಂಜೂರಾತಿಯನ್ನು ನೀಡಿರುತ್ತೇನೆ."

3. ನನ್ನ ಮುಂದೆ ಹಾಜರು ಪಡಿಸಲಾದ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಸಂಬಂಧಪಟ್ಟ ಕಾನೂನುಗಳನ್ನು ತಿಳಿದುಕೊಂಡು, ವಿವೇಚನೆಯಿಂದ ಮೇಲ್ಕಂಡ ಆದೇಶವನ್ನು ಮಾಡಿರುತ್ತೇನೆ.

4. ನಾನು ಮಾಡಿದ ದಿಃ15.12.2018ರ ಆದೇಶವನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ನಿಪಿ–21 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–21(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ–**

5. ಕಛೇರಿಯಲ್ಲಿ, ಸಂಪೂರ್ಣ ಕಡತವನ್ನು ನನ್ನ ಮುಂದೆ ಇಟ್ಟಿದ್ದರು. ನನ್ನ ಮುಂದೆ ಯಾವ ಯಾವ ದಾಖಲಾತಿಗಳನ್ನು ಹಾಜರು ಪಡಿಸಿದ್ದರು ಮತ್ತು ನಾನು ಯಾವ ಯಾವ ದಾಖಲಾತಿಗಳನ್ನು ಪರಿಶೀಲಸಿದೆ ಎನ್ನುವ ಬಗ್ಗೆ ನಿಪಿ–21 ಆದೇಶದಲ್ಲಿ ನಾನು ನಮೂದಿಸಿರುತ್ತೇನೆ. ದಾಖಲಾತಿಗಳನ್ನು ಪರಿಶೀಲಿಸಿದಾಗ, ಯಾವುದಾದರೂ ದಾಖಲಾತಿಗೆ ಸಂಬಂಧಪಟ್ಟಂತೆ ಸಂಶಯ ಉಂಟಾದಲ್ಲಿ, ಆ ಬಗ್ಗೆ ವಿವರಣೆಯನ್ನು ಪುನಃ ಪಡೆದುಕೊಳ್ಳುತ್ತೇನೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಮೂಲತಃ ಭೂಪರಿವರ್ತನೆಗೆ ಅರ್ಜಿಯನ್ನು ಕೊಟ್ಟಿದ್ದವರು ಸಿಸ್ಟರ್ ತೆರೆಸಾ ಎನ್ನುವವರು ಎನ್ನುವುದು ಸರಿ. ಸಂಸ್ಥೆಯ ಪರವಾಗಿ ಆ ಅರ್ಜಿಯನ್ನು ಕೊಟ್ಟಿದ್ದರು. ದೋ.ಪಟ್ಟಿಯ ಪು.ಸಂ.167ರ ಅನುಬಂಧ 1ರಲ್ಲಿ ಸಿಸ್ಟರ್ ತೆರೆಸಾರವರು ಸಂಸ್ಥೆಯ ಹೆಸರನ್ನು ನಮೂದಿಸಿರುವುದಿಲ್ಲ ಎನ್ನುವುದು ಸರಿ. ದೋ.ಪಟ್ಟಿಯ ಪು.ಸಂ.127ರ ಪಹಣಿಪತ್ರಿಕೆಯಲ್ಲಿ ಸರ್ವೇ ನಂ.610/6 ರಲ್ಲಿ 1ಎಕರೆ 10 ಗುಂಟೆ ಸ್ವತ್ತು ಸೊಸೈಟಿ

ಆಫ್ ಕಾರ್ಮಲೈಟ್ ಟೆರಿಷಿಯನ್ ಸಿಸ್ಟರ್ಸ್ ಇನ್ ಇಂಡಿಯಾ, ಮೈಸೂರು – ಪರ ಸಿಸ್ಟರ್ ತೆರೆಸಾ ಎಂದಿದೆ ಎನ್ನುವುದು ಸರಿ. ದೋ.ಪಟ್ಟಿಯ ಪು.ಸಂ.95 ರಲ್ಲಿ ದಿಃ05.07.2017 ರಂದು 'RTC ಯಲ್ಲಿ ಸಂಸ್ಥೆಯ ಹೆಸರು ಬರದಿರುವುದರಿಂದ ಕರ್ನಾಟಕ ಭೂ ಸುಧಾರಣೆ 109 ರ ಅಡಿ ಆಗಿರುವ ಬಗ್ಗೆ ದಾಖಲೆ ನೀಡಲು, ತಿಳುವಳಿಕೆ ಪತ್ರ ನೀಡಿದೆ.' ಎಂದಿದೆ ಎನ್ನುವುದು ಸರಿ. ಸದರಿ ಪು.ಸಂ.95 ನ್ನು ನಿಡಿ–3 ಎಂದು ಗುರುತು ಪಡಿಸಿಕೊಳ್ಳಲಾಯಿತು. ಅದರಂತೆ ಖಾಸಗಿ ವ್ಯಕ್ತಿಯ ಹೆಸರಿಗೆ ಭೂ ಸುದಾರಣೆ ಕಾಯ್ದೆಯ ಅಡಿಯಲ್ಲಿ ಭೂ ಪರಿರ್ವತನೆ ಮಾಡಲು ಬರುವುದಿಲ್ಲ ಎಂದು ಅರ್ಥವಾಗುತ್ತದೆ ಎನ್ನುವುದು ಸರಿಯಲ್ಲ.

6. ದೂರನ್ನು ನೀಡಿರುವವರು ಟಿ.ನರಸೀಪುರದ ನಿವಾಸಿ ಎನ್ನುವುದು ಸರಿ. ಭೂಪರಿವರ್ತನೆ ಕೇಳಿರುವ ವ್ಯಕ್ತಿಗೂ, ದೂರುದಾರನಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಪರಿಶೀಲಿಸಿದ ದಾಖಲಾತಿಗಳಲ್ಲಿ ನಿಪಿ–1 ರಂತೆ, ದೂರುದಾರನಿಗೂ ಮತ್ತು ಭೂಪರಿರ್ವತನೆಯ ವ್ಯವಹಾರಕ್ಕೂ ಸಂಬಂಧ ಕಂಡು ಬರುತ್ತದೆ.

7. ದೋ.ಪಟ್ಟಿಯ ಪು.ಸಂ.81 ರಲ್ಲಿ ಆರೋಪಿಯ ಎಡಗೈಯನ್ನು ಅದ್ದಿಸಿದ ಫಿನಾಪ್ತಲೀನ್ ಮತ್ತು ಸೋಡಿಯಂ ಕಾರ್ಬೋನೇಟ್ ದ್ರಾವಣ 'Positive' ಎಂದು ನಮೂದಿದೆ ಎನ್ನುವುದು ಸರಿ. ನಿಪಿ–15, ದೋ.ಪಟ್ಟಿಯ ಪು.ಸಂ.50 ರಲ್ಲಿ, ಆರೋಪಿ ಲಂಚದ ಹಣವನ್ನು ಪ್ಯಾಂಟಿನ ಎಡಭಾಗದ ಜೇಬಿಗೆ ಹಾಕಿಕೊಂಡ ಎಂದು ನಮೂದಿದೆ ಎನ್ನುವುದು ಸರಿ. ಸದರಿ ಪುಟವನ್ನು ಮುಂದುವರೆದು ಓದಲಾಗಿ ಆತನ ಪ್ಯಾಂಟಿನ ಬಲಭಾಗದ ಜೇಬಿನ ಒಳಬದಿಯನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಲಾಗಿದೆ ಎಂದಿದೆ ಎನ್ನುವುದು ಸರಿ. ನಾನು ದಾಖಲಾತಿಗಳನ್ನು ಪರಿಶೀಲಿಸಿದಾಗ ಆರೋಪಿ ತನ್ನ ಪ್ಯಾಂಟಿನ ಎಡಭಾಗದ ಜೇಬಿಗೆ ಹಾಕಿಕೊಂಡ ಲಂಚದ ಹಣ, ಆತನ ಬಲಭಾಗದ ಜೇಬಿಗೆ ಹೇಗೆ ಬಂತು ಎನ್ನುವ ಬಗ್ಗೆ ವಿವರಣೆಯನ್ನು ನಾನು ಕೇಳಿರುವುದಿಲ್ಲ ಏಕೆಂದರೆ ಈ ದಾಖಲೆಯನ್ನು ಹೊರತು ಪಡಿಸಿ, ಉಳಿದ ದಾಖಲಾತಿಗಳಲ್ಲಿ 'ಎಡಜೇಬು' ಎಂದು ನಮೂದಾಗಿರುತ್ತದೆ. ಆದ್ದರಿಂದ ಇದು ಕೈತಪ್ಪಿನಿಂದ ಆದಂತಹ ತಪ್ಪು ಆಗಿರುತ್ತದೆ ಎಂದು ಪರಿಗಣಿಸಿರುತ್ತೇನೆ. ಈ ಅಂಶ ಕೈತಪ್ಪಿನಿಂದ ಆದ ಅಂಶವಾಗಿರುತ್ತದೆ ಎನ್ನುವ ಬಗ್ಗೆ ನಾನು ತನಿಖಾಧಿಕಾರಿಯನ್ನು ವಿಚಾರಿಸಿರುವುದಿಲ್ಲ.

ನಾನು ಇಂದು ತಂದಿರುವ ನನ್ನ ಕಛೇರಿಯ ಕಡತದಲ್ಲಿ, ನಾನು ಈ ಅಂಶದ ಬಗ್ಗೆ ಏಕೆ ವಿವರಣೆಯನ್ನು ಕೇಳಿ ಪಡೆದಿರುವುದಿಲ್ಲ ಎನ್ನುವುದನ್ನು ಎಲ್ಲಿಯೂ ನಮೂದು ಮಾಡಿರುವುದಿಲ್ಲ.

8. ದೋ.ಪಟ್ಟಿಯ ಪ್ರ.ಸಂ.116 ರಲ್ಲಿ ಕಂಡುಬರುವ ದಿಃ31.12.2016 ರಂದು ಜಿಲ್ಲಾಧಿಕಾರಿಗಳ ಕಛೇರಿಯಿಂದ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಯಾವ ಯಾವ ಸ್ವತ್ತುಗಳನ್ನು ಮತ್ತು ಯಾರ ಯಾರ ಸ್ವತ್ತುಗಳನ್ನು ಭೂ ಪರಿವರ್ತನೆ ಮಾಡಬಹುದು ಮತ್ತು ಯಾವ ಯಾವ ಅಧಿಕಾರಿಯ ಕರ್ತವ್ಯ ಈ ಸಂಬಂಧ ಏನೇನೂ ಎನ್ನುವ ಬಗ್ಗೆ ನಮೂದಿದೆ ಎನ್ನುವುದು ಸರಿ. ಸದರಿ ಸುತ್ತೋಲೆಯನ್ನು ನಿಡಿ-4 ಎಂದು ಗುರುತು ಪಡಿಸಿಕೊಳ್ಳಲಾಯಿತು. ಈ ಸುತ್ತೋಲೆಯಂತೆ ಭೂ ಪರವರ್ತನೆಗೆ ಸಂಬಂಧಪಟ್ಟಂತೆ ಗ್ರಾಮ ಲೆಕ್ಕಿಗ ಯಾವುದೇ ಕರ್ತವ್ಯ/ಕೆಲಸ ಇರುವುದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಭೂಪರಿವರ್ನೆಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗರ ವರದಿಯನ್ನು ರಾಜಸ್ವ ನಿರೀಕ್ಷಕರು ಪಡೆಯುತ್ತಾರೆ. ಈ ಸಂಬಂಧ ಆರೋಪಿಯ/ಗ್ರಾಮಲೆಕ್ಕಿಗರ ಕರ್ತವ್ಯ, ಕೆಲಸವೂ ಇರುತ್ತದೆ ಎನ್ನುತ್ತಾರೆ. ಈ ನಿಡಿ-4 ಮಾರ್ಗಸೂಚಿಯು ಗ್ರಾಮ ಲೆಕ್ಕಿಗರ ಯಾವುದೇ ಕರ್ತವ್ಯಕ್ಕೂ ಅಡಿಯಾಗಿರುವುದಿಲ್ಲ ಎನ್ನುತ್ತಾರೆ. ನಾನು ಹೇಳಿರುವ ಈ ವಿವರಣೆ ನನ್ನ ಮುಂದಿರುವ ಕಛೇರಿಯ ಕಡತದಲ್ಲಿ ನಮೂದು ಮಾಡಿರುವುದಿಲ್ಲ. ನಾನು ಅಭಿಯೋಜನಾ ಮಂಜೂರಾತಿಯನ್ನು ನೀಡುವಾಗ ಯಾವುದೇ ದಾಖಲಾತಿಗಳನ್ನು ಪರಿಶೀಲಿಸದೇ ನೀಡಿರುವುದರಿಂದ, ಈ ಮೇಲ್ಕಂಡ ರೀತಿಯನ್ನು ವಿವರಣೆಯನ್ನು ನೀಡುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಂದೆ ಇದ್ದಂತಹ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಧಾರಗಳು ಇವೆ ಎಂದು ನಾನು ತಪ್ಪು ಅಭಿಪ್ರಾಯಕ್ಕೆ ಬಂದು ಅಭಿಯೋಜನಾ ಮಂಜೂರಾತಿಯನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.